ದಿ:15.11.2022 OS.No.106/2015 PW-1

ದಿ:15.11.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಶ್ರೀ. ಎ ಬಿ ಕೆ ವಕೀಲರಿಂದ:

ಸಿ ಸಿ *665/2015* ರಲ್ಲಿ ವಸಂತ ಮತ್ತು ಬೊಮ್ಮರಾಜುರವನ್ನು ಆರೋಪಿಗಳನ್ನಾಗಿ ಮಾಡಿದ್ದರು. ವಾದಿ ಬಂದು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದ ನಂತರ ಪ್ರತಿವಾದಿಯವರನ್ನು ಆರೋಪಿಯನ್ನಾಗಿ ಸೇರಿಸಿರುತ್ತಾರೆ ಎಂದರೆ ಸರಿ. ವಸಂತ ಮತ್ತು ಬೊಮ್ಮರಾಜುರವರು ತಟ್ಟೆಕೆರೆಯಲ್ಲಿ ವಾಸವಾಗಿದ್ದಾರೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿದ್ದು ಅದರಲ್ಲಿರುವ ಫೋಟೋ ಮತ್ತು ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯು ವಾಹನ ಚಾಲನಾ ಪರವಾನಿಗೆಯಾಗಿದ್ದು ಸದರಿ ದಾಖಲೆಯನ್ನು ನಿಡಿ-*1* ಎಂದು ಗುರುತಿಸಲಾಯಿತು. ಮತ್ತೊಂದು ದಾಖಲಾತಿಯನ್ನು ತೋರಿಸಿ ಅದನ್ನು ವಾಹನ ಚಾಲನೆ ಪರವಾನಿಗೆ ಯಾಗಿದ್ದು ಅದನ್ನು ನಿಡಿ-*2* ಎಂದು ಗುರುತಿಸಲಾಯಿತು. ವಾದಿ ಮಂಡ್ಯ ಆರ್ ಟಿ ಓ ಕಛೇರಿಯಲ್ಲಿ ಚಲನಾ ಪರವಾನಿಗೆಯನ್ನು ಮಾಡಿಸಿದ್ದಾರೆ. ನಿಡಿ-*1* ರಲ್ಲಿ ಇರುವ ವಿಳಾಸದಲ್ಲಿ ತಂದೆಯ ಹೆಸರು ನಾಗಣ್ಣ ಎಂದು ನಮೂದು ಆಗಿದೆ ಮತ್ತು ವಿಳಾಸ ಲೀಲಾವತಿ ಬಡಾವಣೆ, *4* ನೇ ಕ್ರಾಸ್, *4* ನೇ ಮುಖ್ಯ ರಸ್ತೆ, ಮದ್ದೂರು ಟೌನ್ ಮಂಡ್ಯ ಜಿಲ್ಲೆ ಎಂದರೆ ಸಾಕ್ಷಿ ವಿಳಾಸ ಸರಿ ಇದೆ ಆದರೆ ತಂದೆಯ ಹೆಸರು ತಪ್ಪಾಗಿ ನಮೂದು ಆಗಿದೆ ಎಂದು ನುಡಿಯುತ್ತಾರೆ. ಸದರಿ ತಂದೆಯ ಹೆಸರು ಮತ್ತು ವಿಳಾಸವನ್ನು ನಿಡಿ-*1* ಎ ಮತ್ತು ನಿಡಿ-*1* ಬಿ ಎಂದು ಗುರುತಿಸಲಾಯಿತು. ಪಡಿತರ ಚೀಟಿಯನ್ನು ತೋರಿಸಲಾಗಿ ಅದರಲ್ಲಿರುವ ವಾದಿಯ ಫೋಟೋವನ್ನು ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಡಿ-*3* ಎಂದು ಗುರುತಿಸಲಾಯಿತು. ನಿಡಿ-*3* ರಲ್ಲಿಯೂ ಸಹ ತಂದೆಯ ಹೆಸರು ನಾಗಣ್ಣ

ಎಂದೇ ನಮೂದು ಆಗಿದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ನಿಡಿ-3 ರಲ್ಲಿರುವ ತಂದೆಯ ಹೆಸರನ್ನು ನಿಡಿ-3 ಎ ಎಂದು ಗುರುತಿಸಲಾಯಿತು. ವಾದಿ ಎಲ್ಲಿ ವ್ಯಾಸಂಗ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಮದ್ದೂರಿನಲ್ಲಿ ಎಂದು ನುಡಿಯುತ್ತಾರೆ. ವಾದಿಯು ಯಾವ ಶಾಲೆಯಲ್ಲಿ ವ್ಯಾಸಂಗ ಮಾಡಿದರು ಎಂದು ಕೇಳಿಕೊಂಡು ಬಂದು ಹೇಳುತ್ತೀರಾ ಎಂದರೆ ಸರಿ ಎಂದು ನುಡಿಯುತ್ತಾರೆ. ವಾದಿಯನ್ನು ನಿಮ್ಮ ಜೊತೆಯಲ್ಲಿಯೇ ಕರೆದುಕೊಂಡು ಬಂದು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಸಬಹುದಲ್ಲವೇ ಎಂದರೆ ಸಾಕ್ಷಿ ಕೇಳಬೇಕು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.